ಈ) ಕೊರಟಗೆರೆ ತಾಲ್ಲೂಕಿನಲ್ಲಿ 5758 ನಿವೇಶನ ರಹಿತರನ್ನು ಗುರುತಿಸಲಾಗಿದೆ. ಇಲ್ಲಿಯವರೆಗೆ 982 ನಿವೇಶನ ಹಂಚಿಕೆ ಮಾಡಿದೆ. ಉಳಿಕೆ 4776 ಜನರಿಗೆ ನಿವೇಶನ ಲಭ್ಯತೆ ಅನ್ವಯ ಆದ್ಯತೆ ಮೇರೆಗೆ ನಿವೇಶನಗಳನ್ನು ವಿತರಿಸಲು ಕ್ರಮ ತೆಗೆದುಕೊಳ್ಳಲಾಗುವುದು.

ಕೊರಟಗೆರೆ ತಾಲ್ಲೂಕಿಗೆ ಬೆಂಗಳೂರಿನಿಂದ ಹೆಚ್ಚಿನ ಬಸ್ಸುಗಳ ಸೌಕರ್ಯ

889 (990) ಶ್ರೀ ಚನ್ನಿಗಪ್ಪ ಸಿ. (ಕೊರಟಗೆರೆ) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ತುಮಕೂರು ಜಿಲ್ಲೆ, ಕೊರಟಗೆರೆ ತಾಲ್ಲೂಕಿಗೆ ಬೆಂಗಳೂರಿನಿಂದ ಡಬಸ್‌ಪೇಟೆ ಮಾರ್ಗ ಗೊರವನಹಳ್ಳಿ, ಲಕ್ಷ್ಮೀದೇವಾಲಯ, ದೇವರಾಯನ ದುರ್ಗ ಮಾರ್ಗ ಕೊರಟಗೆರೆಗಳ ಪ್ರತಿ ದಿನ ಸಂಚರಿಸುವ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಬಸ್ಸುಗಳ ಸಂಖ್ಯೆ ಎಷ್ಟು;

ಆ) ಈ ಮಾರ್ಗದಲ್ಲಿ ಪ್ರತಿದಿನ ಅಧಿಕ ಸಂಖ್ಯೆಯಲ್ಲಿ ಪ್ರಯಾಣಿಕರು ಪ್ರಯಾಣಿಸುತ್ತಿರುವುದರಿಂದ ಹೆಚ್ಚಿನ ಬಸ್ಸಿನ ಸೌಕರ್ಯವನ್ನು ಈ ಮಾರ್ಗದಲ್ಲಿ ಒದಗಿಸಲಾಗಿದೆಯೇ;

ಇ) ಹಾಗಿಲ್ಲದಿದ್ದಲ್ಲಿ, ಈ ಮಾರ್ಗದ ಪ್ರಯಾಣಿಕರಿಗೆ ಹೆಚ್ಚಿನ ಬಸ್ಸಿನ ಸೌಕರ್ಯವನ್ನು ಒದಗಿಸಿಕೊಡುವುದು ಯಾವಾಗ?

ಶ್ರೀ ಸಿ. ಆರ್. ಸಗೀರ್ ಅಹ್ಮದ್ (ಸಾರಿಗೆ ಸಚಿವರು) :

ಅ) ಬೆಂಗಳೂರಿನ ಗೊರವನಹಳ್ಳಿ, ಲಕ್ಷ್ಮೀದೇವಾಲಯಕ್ಕೆ (ತೀರ್ಥ) ಪ್ರತಿ ದಿನ ನಾಲ್ಕು ಸಾರಿಗೆಗಳನ್ನು ಕಾರ್ಯಾಚರಣೆ ಮಾಡಲಾಗುತ್ತಿದೆ. ಬೆಂಗಳೂರಿನಿಂದ ಡಾಬಸ್‌ಪೇಟೆ, ದೇವರಾಯನ ದುರ್ಗ ಮತ್ತು ಕೊರಟಗೆರೆ, ಮಾರ್ಗವಾಗಿ ಕೊಂಡ ವಾಡಿಗೆ ಪ್ರತಿದಿನ ಒಂದು ಸಾರಿಗೆಯನ್ನು ಕಾರ್ಯಚರಣೆ ಮಾಡಲಾಗುತ್ತಿದೆ.

ಆ) ಶುಕ್ರವಾರಗಳು, ಭಾನುವಾರಗಳು ಮತ್ತು ಸಾರ್ವತ್ರಿಕ ರಜಾ ದಿನಗಳಂದು ಹೆಚ್ಚಾಗುವ ಸಂಚಾರ ಒತ್ತಡಕ್ಕೆ ಅನುಗುಣವಾಗಿ ಬೆಂಗಳೂರಿನಿಂದ ಗೊರವನಹಳ್ಳಿ ದೇವಸ್ಥಾನಕ್ಕೆ (ತೀರ್ಥ) ನಾಲ್ಕು ಹೆಚ್ಚುವರಿ ಸಾರಿಗೆಗಳನ್ನು ಕಾರ್ಯಾಚರಣೆ ಮಾಡಲಾಗುತ್ತಿದೆ. ಪ್ರತಿ ವರ್ಷವೂ ಹೆಚ್ಚುವರಿ ಬಸ್ಸುಗಳನ್ನು ಕಾರ್ಯಾಚರಣೆ ಮಾಡುವ ಜಾತ್ರೆ ಅವಧಿಯು ಹೊರತು ದೇವರಾಯನದುರ್ಗಕ್ಕೆ ಪ್ರಯಾಣಿಕರ ಒತ್ತಡ ಕಡಿಮೆಯಿರುತ್ತದೆ. ಆದಾಗ್ಯೂ ಭಾನುವಾರಗಳು ಮತ್ತು ರಜಾ ದಿವಸಗಳಂದು ದೇವರಾಯನದುರ್ಗಕ್ಕೆ ಹೆಚ್ಚುವರಿ ಸಾರಿಗೆಗಳನ್ನು ಕಾರ್ಯಾಚರಣೆ ಮಾಡಲು ಆಲೋಚಿಸಲಾಗಿದೆ.

ಇ) ಒದಗಿಸಲಾಗಿರುವ ಸಾರಿಗೆಗಳು ಸದ್ಯಕ್ಕೆ ಸಾಕಾಗುತ್ತವೆ. ಅಗತ್ಯ ಕಂಡು ಬಂದಂತೆ ಈ ಮಾರ್ಗಗಳಲ್ಲಿ ಹೆಚ್ಚುವರಿ ಸಾರಿಗೆಗಳನ್ನು ಕಾರ್ಯಾಚರಣೆ ಮಾಡಲಾಗುವುದು.

ಗೃಹಮಂಡಳಿಯಿಂದ ಮನೆಗಳ ಹಂಚಿಕೆ

890 (991) ಶ್ರೀ ಚನ್ನಿಗಪ್ಪ ಸಿ. (ಕೊರಟಗೆರೆ) : ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ಗೃಹ ಮಂಡಳಿಯಿಂದ ಈಗಾಗಲೇ ಹಂಚಿಕೆ ಮಾಡಿರುವ LIG, MIG, HIG ಮನೆಗಳ ಸಂಖ್ಯೆ ಎಷ್ಟು?

ಆ) ಈಗಾಗಲೇ ಈ ಮನೆಗಳಿಗಾಗಿ ಅರ್ಜಿ ಸಲ್ಲಿಸಿರುವವರ ಸಂಖ್ಯೆ ಎಷ್ಟು; ಈ ಬಗ್ಗೆ ಸರ್ಕಾರ ಯಾವ ಕ್ರಮ ಕೈಗೊಂಡಿದೆ;

ಇ) ಹಲವಾರು ವರ್ಷಗಳಿಂದ ಅರ್ಜಿದಾರರು ಅರ್ಜಿಯನ್ನು ಸಲ್ಲಿಸಿದ್ದರೂ, ಈವರೆಗೆ ಮನೆ ಹಂಚಿಕೆ ಮಾಡದೇ ವಿಳಂಬ ಮಾಡಲು ಕಾರಣವೇನು;

ಈ) ಸರ್ಕಾರ ಶೀಘ್ರಗತಿಯಲ್ಲಿ ಮನೆಗಳನ್ನು ಹಂಚಿಕೆ ಮಾಡಲು ಕೈಗೊಳ್ಳುವ ಕ್ರಮವೇನು?

ಶ್ರೀ ಖಮರುಲ್ ಇಸ್ಲಾಂ (ವಸತಿ ಸಚಿವರು) :

ಅ) ಕರ್ನಾಟಕ ಗೃಹ ಮಂಡಳಿಯಿಂದ ವರ್ಗವಾರು ಹಂಚಿಕೆ ಮಾಡಿದ ವಿವರ ಕೆಳಗಿನಂತಿದೆ

ಆರ್ಥಿಕ ದುರ್ಬಲ ವರ್ಗ	=	37059
ಕಡಿಮೆ ಆದಾಯ ವರ್ಗ	=	39830
ಮಧ್ಯಮ ಆದಾಯ ವರ್ಗ	=	24154
ಹೆಚ್ಚಿನ ಆದಾಯ ವರ್ಗ	=	4957
ಒಟ್ಟು	=	**106000**

ಆ) ಈ ಮನೆಗಳಿಗಾಗಿ ಅರ್ಜಿ ಸಲ್ಲಿಸಿರುವವರ ಸಂಖ್ಯೆ 1,31,000. ಇವುಗಳ ಪೈಕಿ 1,06,000 ಅರ್ಜಿದಾರರಿಗೆ ಮನೆಗಳನ್ನು ಹಂಚಿಕೆ ಮಾಡಲಾಗಿದೆ.

ಇ) ಭೂ ಮಾಲೀಕರ ತಕರಾರುಗಳಿಂದ ಭೂ ಸ್ವಾಧೀನದಲ್ಲಿ ಆಗುವ ವಿಳಂಬ. ಹಾಗೂ ಗುತ್ತಿಗೆದಾರರ ತಕರಾರಿನಿಂದ ಯೋಜನೆ ಪೂರ್ಣಗೊಳಿಸಲು ವಿಳಂಬ ಆಗುವುದು. ಈ ಕಾರಣಗಳಿಂದ ಹಂಚಿಕೆ ಮಾಡುವಲ್ಲಿ ವಿರಳ ವಿಳಂಬವಾಗಿರುತ್ತದೆ.

ಈ) 100 ಹೊಸ ವಸತಿ ಯೋಜನೆಗಳನ್ನು ಹಮ್ಮಿಕೊಂಡಿದ್ದು ಮನೆಗಳ ಹಂಚಿಕೆ ಮಾಡಲು ಶೀಘ್ರ ಕ್ರಮ ಕೈಗೊಳ್ಳುವುದು.

ಸಾರಿಗೆ ಸಂಸ್ಥೆಯಲ್ಲಿ ಹಿರಿಯ ನಾಗರೀಕರಿಗೆ ರಿಯಾಯಿತಿ ಬಸ್‌ಪಾಸ್

891 (1260) ಶ್ರೀ ಚನ್ನಿಗಪ್ಪ ಸಿ. (ಕೊರಟಗೆರೆ) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದ ಹಿರಿಯ ನಾಗರೀಕರಿಗೆ ಸಾರಿಗೆ ಸಂಸ್ಥೆಯಲ್ಲಿ ಪ್ರಯಾಣಿಸಲು ಈ ಹಿಂದೆ ನೀಡುತ್ತಿದ್ದ ರಿಯಾಯಿತಿ ಪಾಸು ಸೌಲಭ್ಯಗಳನ್ನು ರದ್ದುಪಡಿಸಿರುವುದರಿಂದ ರಾಜ್ಯದ ಲಕ್ಷಾಂತರ ವೃದ್ಧರಿಗೆ ತೀವ್ರ ರೀತಿಯ ಅನಾನುಕೂಲವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ;